# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 03/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ನವಿನ್ ಕುಮಾರ್ | ಪ್ರಾಸಾಃ | 18 |
| **ತಂದೆಯ ಹೆಸರುಃ** | ಮುನಿಯಪ್ಪ | ಚಾಸಾಃ | 20 |
| **ವಯಸ್ಸುಃ** | 30 | ಪ್ರಮಾಣ ವಚನ ಭೋದಿಸಿದ ದಿನಾಂಕ | 23.07.2025 |
| **ಉದ್ಯೋಗಃ** | ಸರ್ಕಾರಿ ನೌಕರ | | |
| **ವಾಸ ಸ್ಥಳಃ** | ಚಿಂತಾಮಣಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಿಪಿ-35 ಮತ್ತು ನಿಪಿ-36 ಮಹಜರ್ ನಲ್ಲಿರುವ ಸಹಿ ನನ್ನದು. ಅದನ್ನು ನಿಪಿ-35(ಬಿ) ಮತ್ತು ನಿಪಿ-36(ಬಿ) ಎಂದು ಗುರುತಿಸಲಾಯಿತು. ಒಂದುವರೆ ವರ್ಷದ ಹಿಂದೆ ನಗರ ಠಾಣೆಯವರು ಪಂಚನಾಗಿ ಬರುವಂತೆ ನಮ್ಮ ಕಚೇರಿಗೆ ಕೋಲರಿಕೊಂಡ ಮೇರೆಗೆ ಮ್ಯಾನೇಜರ್ ನಾನು ಹಾಗೂ ಚಾಸಾ-14 ರವರನ್ನು ಪೋಲಿಸರು ಜೀಪ್ನಲ್ಲಿ ಕುಮಾರ್ ಎಂಬಾತನ ಮನೆಯ ಬಳಿ ಕರೆದುಕೊಂಡು ಹೋಗಿ ಹುಡುಕಾಟ ನಡೆಸಿದ್ದು ಯಾವುದೇ ಆಯುಧಗಳು ಸಿಗಲಿಲ್ಲ. ಆ ಸಮಯದಲ್ಲಿ ನಿಪಿ-37 ಮತ್ತು ನಿಪಿ-38 ಪೋಟೊ ತೆಗೆದಿದ್ದರು. ಅದರಲ್ಲಿ ನಾನು ಇದ್ದೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿದ್ದಾರೆ. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿ.12.10.2022 ರಂದು 5 ನೇ ಆರೋಪಿ ನಮ್ಮನ್ನು ಸದರಿ ಜಾಗಕ್ಕೆ ಕರೆದುಕೊಂಡು ಹೋಗಿ 1 ನೇ ಆರೋಪಿಗೆ ಚಾಕು ನೀಡಿದ ಸ್ಥಳ ಎಂದು ತೋರಿಸಿಕೊಟ್ಟ ಮೇರೆಗೆ ಸದರಿ ಸ್ಥಳದ ಮಜರ್ ಜರುಗಿಸಿದ್ದು 5 ನೇ ಆರೋಪಿಯ ಮನೆ ಪರಿಶೀಲನೆ ಮಾಡಿದಾಗ ನಡೆಸಿದ ಮಹಜರ್ ಗೆ ಪಂಚನಾಗಿ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲವೆಂದು ತಿಳಿಸಿದ್ದಾರೆ.**

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 23.07.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.